**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ ಮೂಡಿಗೆರೆ**

**ಸಿ.ಸಿ.ನಂಬರ್‌ಃ1069/2018**

ಸಿಡಬ್ಲ್ಯೂಃ 1
ಪಿಡಬ್ಲ್ಯೂಃ 1

| | | |
|---|---|---|
| ಸಾಕ್ಷಿಯ ಹೆಸರು | : | ವಾಹಿದ |
| ಗಂಡನ ಹೆಸರು | : | ಅಬ್ಬಾಸ್ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಪುಂಜಲಕಟ್ಟೆ, ಬೆಳ್ತಂಗಡಿ |

ಇಂದು ದಿನಾಂಕಃ25.08.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

1. ಆರೋಪಿ ನನ್ನ ಗಂಡ. ನಾನು ಮತ್ತು ಆರೋಪಿ ದಿನಾಂಕಃ21.08.2008 ರಂದು ಪುಂಜಲಕಟ್ಟೆಯ ಬದ್ರಿಯಾ ಜುಮ್ಮಾ ಮಸೀದಿಯಲ್ಲಿ ಗುರುಹಿರಿಯರ ಸಮ್ಮುಖದಲ್ಲಿ ಮುಸ್ಲಿಂ ಸಮೂದಾಯದ ಪದ್ದತಿಗಳಂತೆ ಮದುವೆ ಮಾಡಿಕೊಂಡಿರುತ್ತೇವೆ. ವಿವಾಹದ ಸಂದರ್ಭದಲ್ಲಿ ಆರೋಪಿಯ ಬೇಡಿಕೆಯ ಅನುಸಾರ 3 ಲಕ್ಷ ಹಣ, 240 ಗ್ರಾಂ ಚಿನ್ನ ನೀಡಿದ್ದೆವು. ಮದುವೆಯಾದ ನಾಂತರ ನಾನು ಆರೋಪಿಯ ಮನೆಗೆ ಹೋಗಿದ್ದು ಅಲ್ಲಿ ಕೇವಲ 20 ದಿನಗಳು ಮಾತ್ರ ಅನ್ಯೋನ್ಯವಾಗಿದ್ದೆವು. ತದನಂತರ ಆರೋಪಿಯು ತಾನು ಆಟೋ ರಿಕ್ಷಾ ಖರೀದಿ ಮಾಡಬೇಕೆಂದು 1 ಲಕ್ಷ ಕೊಡುವಂತೆ ನನ್ನಲ್ಲಿ ಕೇಳಿರುತ್ತಾರೆ. ನನ್ನ ತವರು ಮನೆಯಲ್ಲಿ ಆರ್ಥಿಕ ಅಡಚಣೆ ಇದ್ದುದರಿಂದ ನನಗೆ ಕೊಡಲಾಗಿರಲಿಲ್ಲ. ಅದನ್ನೇ ನೆಪವಾಗಿಟ್ಟುಕೊಂಡು ನನ್ನ ಅತ್ತೆ ಐಸಮ್ಮ, ಆರೋಪಿ, ಮೈದುನ ಲತೀಫ್, ಭಾವ ಹಸೈನಾರ್ ಹಾಗೂ ಅವರ ಹೆಂಡತಿ ಜೈನಾಬಿ ಹಾಗೂ ಅವರ ಮಕ್ಕಳಾದ ಮುಸ್ತಫ, ಅನೀಫ್ ಮತ್ತು ಅಸ್ಮಾ, ಇನ್ನೊರ್ವ ಭಾವನಾದ ಇಬ್ರಾಹಿಂರವರ ಹೆಂಡತಿ ಜಮೀಲ, ಅವರ ಮಗ ಅಶ್ರಫ್, ನಾದಿನಿ ಮೈಮುನಾ ಹಾಗೂ ಆಕೆಯ ಗಂಡ ಮಹಮ್ಮದ್ ಮುಸ್ಲಿಯಾರ್, ಅವರ ಮಗಳು ನಾಜಿಯರವರೆಲ್ಲರೂ ಸೇರಿ ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತಾರೆ. ಆ ಬಗ್ಗೆ ನಾನು ಕುಟುಂಬದಲ್ಲಿ ಹೇಳಿದಾಗ, ಕುಟುಂಬದ ಸದಸ್ಯರು 3 ಬಾರಿ ಪಂಚಾಯಿತಿ ನಡೆಸಿ, ಎಲ್ಲಾ ಸರಿ ಹೋಗುತ್ತದೆ ಸ್ವಲ್ಪ ತಾಳ್ಮೆಯಿಂದ ಇರು ಎಂದು ಹೇಳಿ ಕಳುಹಿಸಿದ್ದರು. ಆದರೆ ಅವರೆಲ್ಲರೂ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಮತ್ತೆ ಮತ್ತೆ ಮುಂದುವರೆಸುತ್ತಿದ್ದರು.

2. ದಿನಾಂಕಃ17.03.2011 ರಂದು ಮೇಲೆ ಹೇಳಿದ 13 ಜನರು ಸೇರಿಕೊಂಡು ನನ್ನನ್ನು ಮತ್ತು ನನ್ನ 9 ತಿಂಗಳ ಮಗುವಾದ ಫಾತಿಮಾರವನ್ನು, ನಮ್ಮ ಮೈಮೇಲಿದ್ದ ಚಿನ್ನವನ್ನು ತೆಗೆದುಕೊಂಡು ಮನೆಯಿಂದ ಹೊರಗೆ ಹಾಕಿ, ಹಣ ತರಬೇಕೆಂದು ಬೇಡಿಕೆ ಇಟ್ಟಿರುತ್ತಾರೆ. ತದನಂತರ ದಿನಾಂಕಃ24.12.2011 ರಂದು ಪುಂಜಲಕಟ್ಟೆಯ ನಂದಗೋಕುಲ ಹಾಲ್‌ನಲ್ಲಿ ಊರ ಹಿರಿಯ ಸಮಕ್ಷಮ ಪಂಚಾಯಿತಿ ಮಾಡಿ ನನ್ನನ್ನು ಆರೋಪಿಯ ಮನೆಗೆ ಕಳುಹಿಸಿಕೊಡುವಂತೆ ತೀರ್ಮಾನವಾಗಿರುತ್ತದೆ. ಆದರೆ ಆರೋಪಿ ನನ್ನನ್ನು ಕರೆದುಕೊಂಡು ಹೋಗಿರುವುದಿಲ್ಲ. ತದನಂತರ ದಿನಾಂಕಃ27.11.2012 ರಂದು ಪುಂಜಲಕಟ್ಟೆಯ ಬದ್ರಿಯಾ ಮಸೀದಿಯವರು ನನ್ನ ಮತ್ತು ಆರೋಪಿಯ ನಡುವಿನ ಸಮಸ್ಯೆಯನ್ನು ಬಗ್ಗೆ ಹರಿಸುವಂತೆ ಮೊಹಿದ್ದೀನ್ ಜುಮ್ಮಾ ಮಸೀದಿರವರಿಗೆ ಕೋರಿರುತ್ತಾರೆ. ದಿನಾಂಕಃ08.12.2012 ರಂದು ಆ ಬಗ್ಗೆ ಪಂಚಾಯಿತಿ ನಡೆದು ಎರಡೂ ಕುಟುಂಬದವರನ್ನು ಸೇರಿಸಿ ನನ್ನನ್ನು ಆರೋಪಿಯ ಮನೆಗೆ ಕರೆದುಕೊಂಡು ಹೋಗುವಂತೆ ತೀರ್ಮಾನವಾಯಿತು. ಆದರೆ ಆರೋಪಿ ನನ್ನನ್ನು ಕರೆದುಕೊಂಡು ಹೋಗಲಿಲ್ಲ. ಆ ಸಂದರ್ಭದಲ್ಲಿ ಆರೋಪಿ ನೀನು ಈಗ ನಿನ್ನ ತಾಯಿಯ ಮನೆಗೆ ಹೋಗು, ಹಣ ತರದೆ ನಿನ್ನನ್ನು ನಮ್ಮ ಮನೆಗೆ ಸೇರಿಸುವುದಿಲ್ಲ ಹಾಗೂ ಪ್ರತ್ಯೇಕ ಮನೆ ಮಾಡಿದ ನಂತರ ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿರುತ್ತಾರೆ. ಆದರೆ ನಾನು ಸಾಕಷ್ಟು ಸಮಯ ಕಾದರು ಸಹ ಆರೋಪಿ ನನ್ನನ್ನು ಪ್ರತ್ಯೇಕ ಮನೆ ಮಾಡಿ ಕರೆದುಕೊಂಡು ಹೋಗಿರುವುದಿಲ್ಲ. ಆದಕಾರಣ ನಾನೇ ಆರೋಪಿಯ ಮನೆಗೆ ಹೋದಾಗ ನನ್ನ ಅತ್ತೆ ಐಸಮ್ಮ ಮತ್ತು ಭಾವ ಹಸೈನಾರ್ ರವರುಗಳು ಹಣ ತರದೆ ಮನೆಯೊಳಗೆ ನುಗ್ಗಿದರೆ ಕೈಕಾಲು ಮುರಿದು ಹಾಕುತ್ತೇವೆ ಎಂದು ನನ್ನನ್ನು ಮನೆಯ ಒಳಗಡೆ ಹೋಗಲು ಬಿಟ್ಟಿರುವುದಿಲ್ಲ. ತದನಂತರ 2018 ರಲ್ಲಿ ಆರೋಪಿ ಬೇರೆ ಮದುವೆಯಾಗಿರುವ ಬಗ್ಗೆ ನನಗೆ ಗೊತ್ತಾಯಿತು.

3. ದಿನಾಂಕಃ13.06.2018 ರಂದು ಸಂಜೆ 4.00 ಗಂಟೆಗೆ ನಾನು ನನ್ನ ತಾಯಿಯ ಮನೆಯಲ್ಲಿದ್ದಾಗ ಆರೋಪಿ, ನನ್ನ ಅತ್ತೆ ಐಸಮ್ಮ ಮತ್ತು ಭಾವ ಹಸೈನಾರ್ ಆಟೋದಲ್ಲಿ ಬಂದಿರುತ್ತಾರೆ. ಆಗ ನಾನು ಅರೋಪಿಯನ್ನು 3 ನೇ ಮದುವೆಯಾಗಿರುವ ಬಗ್ಗೆ ವಿಚಾರಿಸಿರುತ್ತೇನೆ. ಆಗ ಆರೋಪಿಯು ನಾನು ಒಂದಲ್ಲ ಇನ್ನೂ 3 ಮದುವೆಯಾಗುತ್ತೇನೆ, ನೀನು ಯಾರು ಕೇಳಲು ಎಂದು ಅವಾಚ್ಯ ಶಬ್ದಗಳಿಂದ ಬೈದು, ನನ್ನ ಮೇಲೆ ಹಲ್ಲೆ ನಡೆಸಿ ಹೋಗಿರುತ್ತಾರೆ. ಇದರಿಂದ ನಾನು ಮಾನಸಿಕವಾಗಿ ನೊಂದಿರುತ್ತೇನೆ. ಮರುದಿನ ಆ ಕುರಿತು ಪುಂಜಲಕಟ್ಟೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತೇನೆ. ತದನಂತರ ಆರೋಪಿಯ ವಿರುದ್ದ ಪುಂಜಲಕಟ್ಟೆ ಪೋಲಿಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ಆರೋಪಿಯು ಪೊಲಿಸರು ಕರೆದಾಗ ಪೋಲಿಸ್

ಠಾಣೆಗೆ ಬಂದಿರುವುದಿಲ್ಲ. ಆದಕಾರಣ ದಿನಾಂಕ:02.07.2018 ರಂದು ಮಹಿಳಾ ಸಾಂತ್ವನ ಕೇಂದ್ರ, ಬೆಳ್ತಂಗಡಿಯಲ್ಲಿ ದೂರು ದಾಖಲಿಸಿರುತ್ತೇನೆ. ದಿನಾಂಕ:16.07.2018 ರಂದು ಸದರಿ ಸಾಂತ್ವನ ಕೇಂದ್ರದವರು ವಿಚಾರಣೆ ಮಾಡಿದಾಗ ಆರೋಪಿಯು ಮತ್ತೊಂದು ಮದುವೆಯಾಗಿರುವುದನ್ನು ಒಪ್ಪಿಕೊಂಡಿದ್ದು, ಹಾಗೂ ತನ್ನ ನಿರ್ಧಾರವನ್ನು ಹೇಳಲು ಒಂದು ವಾರ ಸಮಯ ತೆಗೆದುಕೊಂಡಿರುತ್ತಾರೆ. ತದನಂತರ ಯಾವುದೇ ಸಂಪರ್ಕಕ್ಕೆ ಸಿಗದೇ ತಪ್ಪಿಸಿಕೊಂಡಿರುತ್ತಾರೆ. ಕಾರಣ ನಾನು ದಿನಾಂಕ:01.08.2018 ರಂದು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ. ಸದರಿ ಪೋಲಿಸರು ಚಿಕ್ಕಮಗಳೂರಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕೌನ್ಸಲಿಂಗ್‌ಗೆ ನನ್ನನ್ನು ಕಳುಹಿಸಿರುತ್ತಾರೆ.

4. ದಿನಾಂಕ:10.08.2018 ರಂದು ಅಲ್ಲಿ ಕೌನ್ಸಲಿಂಗ್ ನಡೆದಾಗ ಆರೋಪಿಯು ನನಗೆ ಅಥವಾ ನನ್ನ ಮಗುವಿಗೆ ಜೀವನಾಂಶ ನೀಡಲು ಒಪ್ಪಿರುವುದಿಲ್ಲ. ಆ ಕಾರಣ ಸದರಿ ಕಾನೂನು ಸೇವಾ ಪ್ರಾಧಿಕಾರ ಮುಂದಿನ ಕಾನೂನು ಕ್ರಮ ತೆಗೆದುಕೊಳ್ಳುವಂತೆ ನನಗೆ ಸೂಚಿಸಿರುತ್ತಾರೆ. ತದನಂತರ ದಿನಾಂಕ:29.08.2018 ರಂದು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ನಾನು ಮತ್ತೊಂದು ದೂರು ದಾಖಲಿಸಿರುತ್ತೇನೆ. ದೂರು ದಾಖಲಾದ ನಂತರ ಪೋಲಿಸರು ಮೂಡಿಗೆರೆಯ ಬಾಪುನಗರದ ಸಂತೆಮೈದಾನದ ಆರೋಪಿಯ ಮನೆಯಲ್ಲಿ ಮಹಜರ್ ಮಾಡಿ ಪಂಚನಾಮೆಯನ್ನು 10.45 ರಿಂದ 11.45 ರವರೆಗೆ ಬರೆದು, ನನ್ನ ಸಹಿ ಪಡೆದು, ಫೋಟೋ ತೆಗೆದು, ಕಚ್ಚಾ ನಕಾಶೆಯನ್ನು ತೆಗೆದಿರುತ್ತಾರೆ. ಸದರಿ ಕಾಲಕ್ಕೆ ಚಾಸಾ 8 ಮತ್ತು 9 ರವರು ಸಹ ಹಾಜರಿದ್ದರು. ದಿನಾಂಕ:01.09.2018 ರಂದು ಪೋಲಿಸರು ಮಧ್ಯಾಹ್ನ 12.15 ರಿಂದ 1.00 ಗಂಟೆಯವರೆಗೆ ಮಹಜರ್ ಮಾಡಿ, ಮದುವೆ ಕಾಲದಲ್ಲಿ ತೆಗೆದಿದ್ದ ಫೋಟೋಗಳನ್ನು ಹಾಗೂ ಮದುವೆಗೆ ಸಂಬಂಧಿಸಿದ ದಾಖಲಾತಿಗಳನ್ನು ನನ್ನಿಂದ ವಶಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹ ಸಹಿ ಹಾಕಿದ್ದು, ಅದನ್ನು ಚಾಸಾ 8 ಮತ್ತು 9 ರವರ ಸಮಕ್ಷಮ ಮಾಡಲಾಗಿರುತ್ತದೆ. ತದನಂತರ ಅದೇ ದಿನ ಪೋಲಿಸರು ನನ್ನ ಮರುಹೇಳಿಕೆಯನ್ನು ಪಡೆದಿರುತ್ತಾರೆ. ದಿನಾಂಕ:12.09.2018 ರಂದು ಪೋಲಿಸರು ಪುಂಜಲಕಟ್ಟೆಯ ನನ್ನ ತಾಯಿ ಮನೆಗೆ ಬಂದಿದ್ದು ಅಲ್ಲಿ ಮಧ್ಯಾಹ್ನ 12.30 ರಿಂದ 1.30 ರ ಅವಧಿಯಲ್ಲಿ ಮಹಜರ್ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ಕಾಲಕ್ಕೆ ಚಾಸಾ 8 ಮತ್ತು 10 ಪಂಚರಾಗಿ ಹಾಜರಿದ್ದರು. ಪೋಲಿಸರು ಆರೋಪಿಯ ಸಂಬಂಧಿಕರನ್ನು ದೋಷಾರೋಪಣಾ ಪಟ್ಟಿ ಸಲ್ಲಿಸುವಾಗ ಕೈಬಿಟ್ಟಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ

ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ